

ಜಪದ ರೂಪದಲ್ಲಿ ಹೇಳುತ್ತಾ ಚಾವಡಿಗೆ ಬಂದು ಕೂತರೆಂದರೆ ಅಡುಗೆ ಮನೆಯಲ್ಲಿ ಅಜ್ಜಿ ತನ್ನ ಸೊಸೆಯಂದಿರಿಗೆ "ಮಾವನವರ ಪೂಜೆ ಆಯಿತು. ಬಾಳೆಲೆ ಇಟ್ಟು ಬಡಿಸಿ" ಎನ್ನುವುದು ಅಜ್ಜನ ಮಂತ್ರದಷ್ಟೇ ಶತಸ್ಸಿದ್ಧವಾದ ಮಾತು. ಹೀಗೆ ನಮ್ಮ ಅಜ್ಜ ಶ್ರೀರಾಮಚಂದ್ರ ಕಾಪಾಡಪ್ಪ ಎಂದು ಹೇಳದೆ ಊಟ ಮಾಡಿದ ದಿನವೇ ಇರಲಿಕ್ಕಿಲ್ಲ.

ಅಂತಹ ಅಜ್ಜ ಒಂದು ದಿನ ಸಂಜೆ ಮನೆ ಚಾವಡಿಯಲ್ಲಿ ತನ್ನ ಸ್ನೇಹಿತರ ಜೊತೆ ಖಾಡಾಖಾಡಿ ಮಾತಿನ ಯುದ್ಧ ಮಾಡುವುದು ಕೇಳಿ ನನಗೆ ಆಘಾತವಾಯಿತು. ಅಜ್ಜ, ಶ್ರೀರಾಮ ಬಸಿರಾಗಿರುವ ತನ್ನ ಪತ್ನಿ ನಮ್ಮ ಸೀತಾಮಾತೆಯನ್ನು ಕಾಡಿಗೆ ಅಟ್ಟಿದ್ದು ತಪ್ಪೆಂದು ವಾದಿಸುತ್ತಿದ್ದರು. ಅವರ ಗೆಳೆಯರಲ್ಲೊಬ್ಬರು ಅಷ್ಟೇ ನಿಶ್ಚಯವಾಗಿ ''ರಾಮನು ದೇವರು, ಅವನು ತಪ್ಪು ಮಾಡುವುದು ಹೇಗೆ ಸಾಧ್ಯ. ದೇವರ ಬಗ್ಗೆ ಹಾಗೆ ಹೇಳುವುದು ತಪ್ಪು'' ಎಂದು ಖಂಡಿಸುತ್ತಿದ್ದರು. ''ದೇವರಾದರೇನು? ಹೆಂಡತಿಯನ್ನು ಬಿಡುವ ಅಧಿಕಾರ ಅವನಿಗೆ ಇದೆಯೇ? ಎಲ್ಲರೂ ಹಾಗೆ ಮಾಡಿದರೆ ಲೋಕ ನಡೆಯುವುದು ಹೇಗೆ? ನಮ್ಮ ಮನೆ ಮಕ್ಕಳ ಕತೆ ಬಿಡಿ, ನಮ್ಮ ಗ್ರಾಮದ ಒಬ್ಬ ಹೆಣ್ಣುಮಗಳನ್ನು ಮದುವೆಯಾದ ಗಂಡು ಸುಮ್ಮಸುಮ್ಮನೆ ಅವನ ಹೆಂಡತಿಯನ್ನು ಬಿಟ್ಟರೆ ನಾವು ಕೇಳಿಯೇವೆಯೇ?'' ಎಂಬುದು ಅಜ್ಜನ ಸವಾಲು. ಶ್ರೀರಾಮಚಂದ್ರ ಕಾಪಾಡಪ್ಪ ಎಂದು ಮಧ್ಯಾಹ್ನ ದೇವರಿಗೆ ಅಡ್ಡ ಬೀಳುವ ಅಜ್ಜ ಇವರೆ? ಎಂದು ನನಗೆ ಆಶ್ಚರ್ಯ. ಅದು ಬೇರೆ ಆಗತಾನೆ ನಾನು ಹೈಸ್ಕೂಲು ಪ್ರವೇಶಿಸಿದ್ದೆ.

ಇದು ಈಗ 50 ವರುಷಗಳ ಹಿಂದಿನ ಕತೆ. ನಮ್ಮ ಗ್ರಾಮದ ಬಳಿಯೂ ತಾರು ರಸ್ತೆ ಇರಲಿಲ್ಲ. ಹೆಚ್ಚಿನವರದ್ದು ಊರೊಳಗೆ, ಗ್ರಾಮದಲ್ಲೆಲ್ಲಾ ಕಾಲ್ನಡಿಗೆಯ ಸುತ್ತಾಟ. ಪರಿಚಯದವರು ಕಂಡಾಗ ಪರಸ್ಪರ ಒಂದು ನಿಮಿಷವಾದರೂ ಮಾತನಾಡಿಯೇ ಮುಂದಿನ ಹೆಜ್ಜೆ. ಊರಲ್ಲಿ ಜಾತಿ ಮತ, ಧರ್ಮಗಳ ಭೇದ ಇಲ್ಲದೆ ಎಲ್ಲರಿಗೂ ಪರಸ್ಪರ ಪರಿಚಯ–ವಿಶ್ವಾಸ ಇದ್ದ ಕಾಲ. ಆಗ ನಮ್ಮ ಊರಲ್ಲಿ ತನಿಯಪ್ಪ ಎಂಬ ಬಡವನೊಬ್ಬನ ಮಗಳನ್ನು ಪಕ್ಕದ ಊರಿನ ಪೂವಪ್ಪನಿಗೆ ಮದುವೆ ಮಾಡಿಕೊಟ್ಟಿದ್ದರು. ಅವಳು ಬಸುರಾಗಿ ಹೆರಲೆಂದು ತವರು ಮನೆಗೆ ಬಂದಿದ್ದಳು. ಹೆರಿಗೆಯಾದ ಬಳಿಕ, ಅವಳ ಗಂಡ ಪೂವಪ್ಪ ತನ್ನ ಹೆಂಡತಿ ಮಗುವನ್ನು ವಾಪಸು ಕರಕೊಂಡು ಹೋಗಲು ಒಪ್ಪಲಿಲ್ಲ. ತಾನು ತನ್ನ ಹೆಂಡತಿಯನ್ನು ಬಿಟ್ಟಿರುವುದಾಗಿ ನಮ್ಮ ಊರವರ ಬಳಿ ಹೇಳಿದ್ದ. ಅವಳ ಅಪ್ಪನೇ ಹೋಗಿ ಅಳಿಯನಲ್ಲಿ ಕೇಳಿದ್ದಕ್ಕೆ ಒಂದೊಂದು ಸಲ ಒಂದೊಂದು ಕಾರಣ ಕೊಟ್ಟಿದ್ದ. ಮೊದಲೇ ಹೇಳಿದ ಹಾಗೆ ಊರವರಿಗೆ ಎಲ್ಲವೂ ತಿಳಿದಿರುತ್ತಿದ್ದ ಕಾಲ ಅದು. ಊರವರೆಲ್ಲ ಒಟ್ಟಾಗಿ ಕೆಲವು ಸಮೂಹ ಹಕ್ಕುಗಳನ್ನು, ಅಂದರೆ ಕಮ್ಯೂನಿಟಿ ರೈಟ್ ಅಂತಾರಲ್ಲ ಹಾಗೆ, ನಂಬಿದ್ದ ಕಾಲ. ಈಗಿನ ರೈಟು ಪ್ರೈವೆಸಿಯಂತಹ ಖಾಸಗಿತನದ ಹಕ್ಕುಗಳು ಚರ್ಚೆಗೆ ಬರುತ್ತಿದ್ದ ಕಾಲ ಅದಲ್ಲ.

ಆ ಸಂದರ್ಭದಲ್ಲಿ ಪೂವಪ್ಪ ನಮ್ಮ ಊರ ಸಮೀಪದ ದಾರಿಯೊಂದರಲ್ಲಿ ಕೆಲಸವೊಂದರ ನಿಮಿತ್ತ ಹಾದುಹೋಗುತ್ತಿದ್ದಾಗ, ನಮ್ಮ ಊರ ಹಿರಿಯರೊಬ್ಬರು ಅವನನ್ನು ನಿಲ್ಲಿಸಿ, "ನಮ್ಮ ಊರ ಹುಡುಗಿ ಏನು ತಪ್ಪು ಮಾಡಿದಳಪ್ಪ. ಅವಳನ್ನು ಯಾಕೆ ಬಿಟ್ಟೆ. ಹೆಂಡತಿಯನ್ನು ಹೀಗೆ ಬಿಡುವುದು ನ್ಯಾಯವಾ?" ಎಂದು ಕೇಳಿದ್ದರು. ಹಾಗೆ ಹಿರಿಯರು ಕೇಳಿದ್ದು ಸರಿಯಾಯಿತು. ಅವ ಮತ್ತೊಂದು ಹೊಸ ಕಾರಣ ಹೇಳಿ ಹೋಗುವುದಾ ಎಂದು ನನ್ನ ಅಜ್ಜನ ಸ್ನೇಹಿತರು ಆಗ ಸಹಾನುಭೂತಿ ವ್ಯಕ್ತಪಡಿಸಿದ್ದರು. ನಮ್ಮ ಊರಿನ ಅಂತಹ ಸುಶೀಲ